## ಅಂಧೋಽಹಂ ಕರುಣಾಸಿಂಧೋ...

### ಶ್ರೀ ವಾದಿರಾಜಗುರುಸಾರ್ವಭೌಮರು ಹೇಳಿಕೊಟ್ಟ ಒಂದು ಅದ್ಭುತ ಪ್ರಾರ್ಥನೆ

ಜೀವನದಲ್ಲಿ ಒಂದು ವಿಚಿತ್ರ ಹಂತವನ್ನು ಮುಟ್ಟಿರುತ್ತೇವೆ. ಒಂದು ದೃಢ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿರುವದಿಲ್ಲ.

ನಮ್ಮ ಲೌಕಿಕ ಜ್ಞಾನ, ಅಲೋಚನೆ, ತಿಳುವಳಿಕೆ, ಗೆಳೆಯರು, ಅಣ್ಣ ತಮ್ಮಂದಿರು, ಅಕ್ಕ ತಂಗಿಯರು, ಗಂಡ, ಹೆಂಡತಿ, ಮಕ್ಕಳು, ತಂದೆತಾಯಿ ಯಾರಿಗೂ ಸಹ ಖಚಿತವಾದ ನಿರ್ಣಯವನ್ನು ಹೇಳಲು ಸಾಧ್ಯವಾಗುತ್ತಿರುವದಿಲ್ಲ. ಅಥವಾ ಅವರು ಹೇಳಿದ ನಿರ್ಣಯ ನಮಗೆ ಒಪ್ಪಿಗೆಯಾಗು-ತ್ತಿರುವದಿಲ್ಲ. ಹೀಗೆ ಮಾಡಿದರೆ ಇಷ್ಟು

ಸಮಸ್ಯೆಗಳು, ಹಾಗೆ ಮಾಡಿದರೆ ಅಷ್ಟು ಸಮಸ್ಯೆಗಳು, ಹೀಗೆ ಮಾಡಿದರೆ ಇಷ್ಟು ಅನುಕೂಲ, ಹಾಗೆ ಮಾಡಿದರೆ ಅಷ್ಟು ಅನುಕೂಲ ಎರಡೂ ನಮಗೆ ಗೊತ್ತಾಗುತ್ತಿರುತ್ತವೆ. ಆದರೆ ಹೆಜ್ಜೆ ಮುಂದಿಡಲು ಭಯ. **ಅದೊಂದು ರೀತಿ ಕಂದಕವನ್ನು ಹಾರುವ ಪ್ರಯತ್ನದಂತೆ. ಹಾರದಿದ್ದರೆ ಇಲ್ಲಿಯೇ ಉಳಿಯಬೇಕು. ಹಾರ ಹೊರಟರೆ ಹೊಂಡದಲ್ಲಿ ಬೀಳುತ್ತೇವೆಂಬ ಭಯ. ಅಷ್ಟು ದೂರವನ್ನು ಹಾರುವ ಸಾಮರ್ಥ್ಯ ನಮಗಿರುತ್ತದೆ. ಆದರೂ ಅಳುಕು, ಏನಾದರೂ ಆಗಿಬಿಟ್ಟರೆ ಎಂಬ ಅಳುಕು.**

ಇದೊಂದು ದೃಷ್ಟಾಂತ ಅಷ್ಟೇ. ಒಂದು ಜಾಗವನ್ನು ಕೊಂಡುಕೊಳ್ಳುವಾಗ, ಇರುವ ಕೆಲಸ ಬಿಟ್ಟು ಮತ್ತೊಂದು ಕೆಲಸಕ್ಕೆ ಸೇರುವಾಗ, ಇಬ್ಬರು ಮೂವರು ವರ ವಧುಗಳು ಬಂದಾಗ ಅವರಲ್ಲಿ ಯೋಗ್ಯರಾದವರನ್ನು ಆರಿಸಬೇಕಾದಾಗ, ಒಂದು ದೊಡ್ಡ ಯೋಜನೆಯನ್ನು ಕೈಗೆತ್ತಿಕೊಳ್ಳುವಾಗ, ಸಂಪಾದಿಸಿದ ಹಣವನ್ನೆಲ್ಲ ಹಾಕಿ ಅದೇನೋ ಒಂದು ಹೊಸ ಪ್ರಯೋಗವನ್ನು ಮಾಡ ಹೊರಟಾಗ

ಹೀಗೆ ಪ್ರತಿಯೊಂದು ಹಂತದಲ್ಲಿಯೂ ಸಹ ನಮಗೆ ಈ ಅಳುಕು ಉಂಟಾಗುತ್ತಲೇ ಇರುತ್ತದೆ.

ಇಂಥಾ ಒಂದು ಸಂದರ್ಭದಲ್ಲಿ, ದೇವರನ್ನು ಪೂರ್ಣವಾಗಿ ನಂಬುವ ಶ್ರದ್ಧಾಳುಗಳಿಗೆ ಶ್ರೀ ವಾದಿರಾಜರು ಒಂದು ಅದ್ಭುತವಾದ ಪ್ರಾರ್ಥನೆಯನ್ನು ಹೇಳಿಕೊಟ್ಟಿದ್ದಾರೆ. ಸರಿಯಾದ ಮಾರ್ಗದಲ್ಲಿ ನಡೆಯಲಿಕ್ಕಾಗಿ ನಾವು ಶ್ರೀಹರಿಯನ್ನು ಬೇಡುವ ಬಗೆಯನ್ನು ಆ ಮಹಾಗುರುಗಳು ನಮಗೆ ಅನುಗ್ರಹಿಸಿದ್ದಾರೆ, ಸರಸಭಾರತೀವಿಲಾಸದಲ್ಲಿ.



ಆ ಒಂದು ಪುಟ್ಟ ಶ್ಲೋಕ, ಸಮಸ್ಯೆಗಳ ಕಾಡಿನಲ್ಲಿ ಕಳೆದುಹೋದ ನಮಗೆ ಮಾರ್ಗದರ್ಶಕ. ಕಷ್ಟಗಳ

ಹೊಡೆತದಲ್ಲಿ ಸಿಲುಕಿ ಮೃತಪ್ರಾಯರಾದವರಿಗೆ ಸಂಜೀವನಿ. ಆ ದಿವ್ಯ ಪ್ರಾರ್ಥನೆ ನೋವಿನ ಸುಳಿಯಲ್ಲಿ ಮುಳುಗುತ್ತಿರುವವರಿಗೆ ದೊರೆಯುವ ಬಲಿಷ್ಠವಾದ ಆಸರೆ. ಪ್ರತಿಯೊಬ್ಬ ಮನುಷ್ಯ ತನ್ನ ಜೀವನದಲ್ಲಿ ಪ್ರತೀನಿತ್ಯ ಪಠಿಸಬೇಕಾದ ದಿವ್ಯಮಂತ್ರ ಆ ಶ್ಲೋಕ.

**ಅಂಧೋಽಹಂ ಕರುಣಾಸಿಂಧೋ**
**ವೀಕ್ಷೇ ನ ಕ್ಷೇಮಪದ್ಧತಿಮ್**
**ಇಂದಿರೇಶ ಕರಂ ಗೃಹ್ಣನ್**
**ವರ್ತಯಾನಿಂದ್ಯವರ್ತ್ಮನಿ**

ಈ ಶ್ಲೋಕವನ್ನು ಹೆಂಗಸರೂ ಅವಶ್ಯವಾಗಿ ಪಠಿಸ-ಬಹುದು. ಪಠಿಸಬೇಕಾದರೆ ಒಂದು ಸಣ್ಣ ವ್ಯತ್ಯಾಸ.

**ಅಂಧಾಽಹಂ ಕರುಣಾಸಿಂಧೋ**
**ವೀಕ್ಷೇ ನ ಕ್ಷೇಮಪದ್ಧತಿಮ್**
**ಇಂದಿರೇಶ ಕರಂ ಗೃಹ್ಣನ್**
**ವರ್ತಯಾನಿಂದ್ಯವರ್ತ್ಮನಿ**

(ಅಂಧಃ ಎನ್ನುವದು ಪುಲ್ಲಿಂಗ. ಕುರುಡ ಎಂದರ್ಥ. ಅಂಧಾ ಎನ್ನುವದು ಸ್ತ್ರೀಲಿಂಗ. ಕುರುಡಿ ಎಂದರ್ಥ)

ಇದರ ಅರ್ಥ ಹೀಗಿದೆ -
ಸ್ವಾಮಿ, ಕರುಣಾಸಿಂಧೋ,  ಯಾವ ದಾರಿಯಲ್ಲಿ ನಡೆದರೆ ಕ್ಷೇಮವೋ, ಯಾವ ದಾರಿಯಲ್ಲಿ ನಡೆದರೆ ಸಮಸ್ಯೆಗಳೋ ಎಂದು ತಿಳಿಯದ ಕುರುಡ(ಡಿ) ನಾನು. ಓ ರಮೆಯರಸ, ನಾನು ನಿನ್ನನ್ನೇ ಸರ್ವಾತ್ಮನಾ ನಂಬಿದ್ದೇನೆ. ಕೃಪೆಯಿಂದ ನನ್ನ ಕೈಹಿಡಿದು ಮುನ್ನಡೆಸು. ಯಾವ ದಾರಿಯಲ್ಲಿ ನಡೆದಾಗ ಹಿರಿಯರು ನನ್ನನ್ನು ದೂಷಿಸುವದಲ್ಲವೋ ಆ ಮಾರ್ಗದಲ್ಲಿ ನನ್ನನ್ನು ನಡೆಸು.

**ಕರುಣಾಸಿಂಧೋ =**  ಓ ಕರುಣೆಯ ಕಡಲೇ

**ಅಹಂ ಅಂಧಃ/ಅಂಧಾ** = ನಾನು ಕಣ್ಣು ಕಾಣದ ವ್ಯಕ್ತಿ.
**ಕ್ಷೇಮಪದ್ಧತಿಂ** = ನನಗೆ ಕ್ಷೇಮವನ್ನುಂಟು ಮಾಡುವ ದಾರಿಯನ್ನು

**ನ ವೀಕ್ಷೇ** = ಕಾಣಲಾರೆ

**ಇಂದಿರೇಶ** = ಓ ರಮೆಯರಸ

**ಕರಂ ಗೃಹ್ಣನ್** = ನನ್ನ ಕೈಯ್ಯನ್ನಿಡಿದು

**ಅನಿಂದ್ಯವರ್ತ್ಮನಿ** = ಸನ್ಮಾರ್ಗದಲ್ಲಿ

**ವರ್ತಯ** = ನಡೆಸು ಸ್ವಾಮಿ.

ಯಾವ ದಾರಿಯಲ್ಲಿ ನಡೆದರೆ ಒಳಿತೋ, ಯಾವ ದಾರಿಯಲ್ಲಿ ನಡೆದರೆ ಕೆಟ್ಟದ್ದೋಎಂದು ಅರಿವಿಲ್ಲದೇ ಒದ್ದಾಡುತ್ತಿದ್ದೇನೆ. ಓ ಕಾರುಣ್ಯದ ಇಂದಿರೇಶ, ನಾನು ನಿನ್ನನ್ನೇ ನಂಬಿದ್ದೇನೆ. ನಿನ್ನನ್ನು ಹೊರತು ಪಡಿಸಿ ಮತ್ತೊಬ್ಬರು ನನಗೆ ಗೊತ್ತಿಲ್ಲ. ಆದ್ದರಿಂದ ಓ ನಾಥ, ಈ ಕುರುಡನ ಕೈ ಹಿಡಿದು ಮುನ್ನಡೆಸು. ಯಾವ ದಾರಿಯಲ್ಲಿ ನಡೆದಾಗ ಮಹಾನುಭಾವರು ಮೆಚ್ಚುತ್ತಾರೆಯೋ, ಯಾವ ಮಾರ್ಗದಲ್ಲಿ ನಡೆದಾಗ ನಮಗೆ ಸುಕ್ಷೇಮವೋ, ಯಾವ ಮಾರ್ಗದಲ್ಲಿ ನಡೆಯವದು ನಿನಗೆ ಪ್ರೀತಿಕರವೋ ಆ ಮಾರ್ಗದಲ್ಲಿ ನಡೆಸು ಎಂದು ಭಕ್ತಿಯಿಂದ ಪ್ರಾರ್ಥನೆ ಮಾಡಬೇಕು.

ಜೀವನದ ಇಕ್ಕಟ್ಟಿನಲ್ಲಿ ಸಿಲುಕಿದಾಗ, ಕವಲುದಾರಿಗಳಲ್ಲಿ ನಿಂತು ತಬ್ಬಿಬ್ಬುಗೊಂಡಾಗ,

ದಾರಿಯೇ ಕಾಣದೇ ಕಂಗೆಟ್ಟಾಗ ಭಕ್ತಿಯಿಂದ ಈ ಶ್ಲೋಕವನ್ನು ಪಠಿಸಿ ಮೈದಣಿಯೆ ದೇವರಿಗೆ ನಮಸ್ಕಾರಗಳನ್ನು ಸಮರ್ಪಿಸಿ. ಸ್ವಾಮಿ ದಾರಿ ತೋರುತ್ತಾನೆ.

ಶ್ರೀ ವಾದಿರಾಜರ ಈ ಶ್ಲೋಕ ಅದೆಷ್ಟು ಜಾಗೃತವಾದ, ಪರಿಣಾಮಕಾರಿಯಾದ ಶ್ಲೋಕ ಎಂದರೆ ನನ್ನ ಜೀವನದಲ್ಲಿ ಹತ್ತಾರು ಬಾರಿ ಈ ಪ್ರಾರ್ಥನೆಯ ಪರಿಣಾಮವನ್ನು ಅನುಭವಿಸಿದ್ದೇನೆ.

ನಾನು ಆಲೋಚಿಸಬಹುದಾದದ್ದನ್ನೆಲ್ಲ ಆಲೋಚಿಸದ ಬಳಿಕವೂ ಅನೇಕ ಬಾರಿ ದಾರಿಗಾಣದೇ ನಿಂತದ್ದಿದೆ. ಆ ಸಂದರ್ಭದಲ್ಲಿ ನಾನು ಮಾಡುವ ಕೆಲಸ ಮಡಿಯುಟ್ಟು ದೇವರ ಮನೆಗೆ ಬಂದು ಈ ಶ್ಲೋಕಗಳನ್ನು ಪಠಿಸುತ್ತ ಗುರುಗಳಿಗೆ, ಶ್ರೀಮದಾಚಾರ್ಯರಿಗೆ ಅವರಲ್ಲಿ ನೆಲೆನಿಂತ ಶ್ರೀವಿಷ್ಣುವಿಗೆ ನಮಸ್ಕಾರ ಮಾಡುವದು.

ಪ್ರತೀಬಾರಿ ಅಚ್ಚರಿ ಎಂದರೆ, ಅಲ್ಲಿಯವರೆಗೆ ಹೊಳೆಯದ ವಿಷಯ ಆ ನಂತರ ಹೊಳೆಯುತ್ತದೆ. ಕಾಣದ ದಾರಿ ಕಾಣುತ್ತದೆ.  ಆ ದಾರಿಯಲ್ಲಿ

ಮುಂದುವರೆಯಲು ಅದಮ್ಯವಾದ ಧೈರ್ಯ ಮೂಡುತ್ತದೆ. ಅದೆಂಥದ ಕಂದಕವಾದರೂ ಸರಿ, ನಡಿ ಹಾರಿ ಗುರಿ ಮುಟ್ಟಿ ಬಿಡೋಣ ಎಂಬ ಹುಮ್ಮಸ್ಸಿನಿಂದ ತಯಾರಾಗಿ ನಿಲ್ಲುತ್ತೇನೆ.

ನಾಸ್ತಿಕರು ದೇವರಿದ್ದಾನೆಯಾ, ಇಲ್ಲವಾ ಎಂದು ಪ್ರಶ್ನೆ ಮಾಡುತ್ತಿರುತ್ತಾರೆ. ನಿಜ, ನಾನೂ ದೇವರನ್ನು ಕಂಡಿಲ್ಲ. ಆದರೆ, ಆ ಅಂತರ್ಯಾಮಿಗೆ ಮೊರೆಹೊಕ್ಕು, ವಿನೀತತೆಯಿಂದ ಪ್ರಾರ್ಥನೆ ಮಾಡಿದಾಗ, [ಎಷ್ಟೋ ಬಾರಿ ಕ್ಷುದ್ರಮಾನುಷಬುದ್ಧಿಯಿಂದ ಸಿಟ್ಟಿಗೆ ಬಂದು  ಕಣ್ಣಿಗೆ ಕಾಣದ ಅವನೊಟ್ಟಿಗೆ ಜಗಳವಾಡಿದಾಗ :) ] ಅವನ ಅನುಗ್ರಹವನ್ನು ಅನುಭವಿಸಿದ್ದೇನೆ. ಪ್ರಾರ್ಥನೆಯ ಪರಿಣಾಮವನ್ನು ಸಾಕ್ಷಾತ್ತಾಗಿ ಅನುಭವಿಸಿದ್ದೇನೆ. ಹೀಗಾಗಿ, ದೇವರ ಅಸ್ತಿತ್ವದ ಕುರಿತು ಆಸ್ತಿಕರಿಗೆ ಯಾವ ಪ್ರಮಾಣವೂ ಬೇಕಾಗಿಲ್ಲ. ಅವರವರ ಸ್ವಂತ ಅನುಭವವೇ ಇರುತ್ತದೆ.

ಹಾಗೆಯೇ, ಸಜ್ಜನರಿಗೊಂದು ಕಿವಿಮಾತು. ಕಷ್ಟ ಬಂದಾಗ ಮೊದಲಿಗೆ ಭಕ್ತಿಯಿಂದ ಪ್ರಾರ್ಥನೆಯನ್ನು ಸಲ್ಲಿಸಿ. ನಿಮ್ಮ ಕಷ್ಟದ ಪರಿ ನಿಮಗೆ ಮಾತ್ರ

ತಿಳಿದಿರುತ್ತದೆ. ಆ ನೋವಿನ ತೀವ್ರತೆಯನ್ನು ಯಾರೋ ಹೊರಗಿನವರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವದಿಲ್ಲ. ಆ ನೋವನ್ನು, ದುಃಖವನ್ನು, ಕಷ್ಟವನ್ನು ನಿಮ್ಮ ಅಂತರ್ಯಾಮಿಯ ಮುಂದೆ ನಿವೇದಿಸಿಕೊಳ್ಳಿ. ಪರಿಹರಿಸು ಎಂದು ಪ್ರಾರ್ಥಿಸಿಕೊಳ್ಳಿ. ನಿಮ್ಮ ಯಾಚನೆ, ನಿವೇದನೆ, ಪ್ರಾರ್ಥನೆಗಳು ಎಷ್ಟು ಪ್ರಾಮಾಣಿಕವಾಗಿರುತ್ತದೆಯೋ, ಅಷ್ಟು ಬೇಗನೇ ಫಲವನ್ನು ಪಡೆಯುತ್ತೀರಿ.

ನಾವು ಪ್ರಾರ್ಥನೆ ಮಾಡುವಾಗ, ನಮ್ಮ ಶಬ್ದಗಳಿಗಿಂತ ಮಹಾನುಭಾವರು ಹೇಳಿಕೊಟ್ಟ ಶಬ್ದಗಳನ್ನು ಬಳಸಿದಾಗ ಅದು ಹೆಚ್ಚಿನ ಫಲವನ್ನು ನೀಡುತ್ತದೆ, ಬೇಗನೇ ಫಲವನ್ನು ನೀಡುತ್ತದೆ. ಪರಮಾತ್ಮನನ್ನು ಹೃದಯಾರವಿಂದದಲ್ಲಿ ಕಂಡು, ಗುರುಪರಂಪರೆಯಲ್ಲಿ ಆರಾಧಿಸಿ ಅವನ ಕುದುರೆರೂಪದ ಜೊತೆಯಲ್ಲಿ ವಿಧವಿಧವಾಗಿ ಆಟವಾಡಿ ಅವನನ್ನು ಮೆಚ್ಚಿಸಿದ ನಮ್ಮ ಶ್ರೀವಾದಿರಾಜಗುರುಸಾರ್ವಭೌಮರು ಹೇಳಿಕೊಟ್ಟ ಈ ಪ್ರಾರ್ಥನೆಗೆ ಪರಮಾತ್ಮ ಒಲಿದಿದ್ದಾನೆ, ಹೀಗಾಗಿ

ಆ ವಾದಿರಾಜಗುರುಗಳ ಪಾದವನ್ನು ಭಕ್ತಿಯಿಂದ ನೆನೆದು ನೀವೂ ಪಠಿಸಿ. ಶ್ರೀಹರಿ ಒಲಿಯುತ್ತಾನೆ.

ನಮ್ಮೆಲ್ಲರ ಮೇಲೆ ಆ ಗುರುವಾದಿರಾಜರ, ಗುರುಪರಂಪರೆಯ, ಶ್ರೀಮದಾಚಾರ್ಯರ ಕರುಣೆಯಿರಲಿ, ನಮ್ಮೆಲ್ಲರನ್ನೂ ಮುಕ್ತಿಯ ಮಾರ್ಗದಲ್ಲಿ ನಡೆಸಲಿ ಎಂದು ಉಡುಪಿನ ಶ್ರೀಕೃಷ್ಣನಲ್ಲಿ ವಿನಮ್ರವಾಗಿ ಪ್ರಾರ್ಥಿಸುತ್ತೇನೆ.



— ವಿಷ್ಣುದಾಸ ನಾಗೇಂದ್ರಾಚಾರ್ಯ

**ಈ ಶ್ಲೋಕವನ್ನು ಹೇಗೆ ಪಠಿಸಬೇಕು ಎನ್ನುವದರ ಕುರಿತ ವಿಡಿಯೋವನ್ನು YouTube ನಲ್ಲಿ Upload ಮಾಡಿದ್ದೇನೆ.**

**Vishwanandini Kannada**

**https://youtu.be/IteuNktYhcE?list=PLS-q0eCWurXm16ZTNC1CSAHyJBOGBAapC**

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**
No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491